# ಗುರು ಪುರಂದರದಾಸರೇ

ಗುರು ಪುರಂದರದಾಸರೇ ನಿಮ್ಮ | ಚರಣಕಮಲವ ನಂಬಿದೆ

ಗರುವ ರಹಿತನ ಮಾಡಿ | ಎನ್ನನು ಹೊರೆವ ಭಾರವು ನಿಮ್ಮದೆ

ಒಂದು ಅರಿಯದ ಮಂದಮತಿ ನಾ | ಇಂದು ನಿಮ್ಮನು ವಂದಿಪೆ

ಇಂದಿರೇಶನ ಪಾದ ತೋರಿಸೋ | ತಂದೆ ಮಾಡಲೂ ಸತ್ಕೃಪೆ

ಮಾರಜನಕನ ಸನ್ನಿಧಾನದಿ | ಸಾರಗಾಯನ ಮಾಡುವ

ನಾರದಾದಿ ರೂಪದಿಂದಲಿ | ತೋರುದರ್ಶನ ತೋರಿದೆ

ಪುರಂದರಾಲಯ ಘಟ್ಟದೊಳು | ನೀ ನಿರುತ ಧನವಗಳಿಸಲು

ಪರಮ ಪುರುಷನು ವಿಪ್ಪನಂದದಿ | ಕರವ ನೀಡಿ ಯಾಚಿಸ

ಪರಮ ನಿರ್ಗುಣ ಮನವನರಿತು | ಸರುವ ಸೋರೆಯ ಗಳಿಸಿದ

ಅರಿತು ಮನದಲಿ ಜರಿದು ಭವಗಳ | ತರುಣಿ ಸಹ ಹೊರಟೆಯಾ

ಅಜಭವಾದಿಗಳರಸನಾದ | ವಿಜಯವಿಠಲನ ಧ್ಯಾನಿಪ

ನಿಜಸುಜ್ಞಾನವ ಕೊಡಿಸಬೇಕೆಂದು | ಭಜಿಪೆನೋ ಕೇಳ್ ಗುರುವರ